29)	ರಾಮನಗರ	4	1	ರಾಮನಗರ	89284.00
			2	ಚನ್ನಪಟ್ಟಣ	89284.00
			3	ಮಾಗಡಿ	89284.00
			4	ಕನಕಪುರ	89284.00
				ಒಟ್ಟು	**357136.00**

ಮುಖ್ಯಮಂತ್ರಿಗಳ ವಿಶೇಷ ಅಭಿವೃದ್ಧಿ ನಿಧಿಯ ಹಂಚಿಕೆ

236 (114) ಶ್ರೀ ಸಿದ್ದು ಸವದಿ (ತೇರದಾಳ) : ಮಾನ್ಯ ಪೌರಾಡಳಿತ, ಸ್ಥಳೀಯ ಸಂಸ್ಥೆಗಳ ಮತ್ತು ಸಾರ್ವಜನಿಕ ಉದ್ದಿಮೆಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸಣ್ಣ ಪಟ್ಟಣಗಳ ಅಭಿವೃದ್ಧಿಗೆ ಬಿಡುಗಡೆ ಮಾಡಿದ ಮುಖ್ಯ ಮಂತ್ರಿಗಳ ವಿಶೇಷ ಅಭಿವೃದ್ಧಿ ಅನುದಾನವನ್ನು ಯಾವ ನಿಯಮಾವಳಿ ಪ್ರಕಾರ ಹಂಚಿಕೆ ಮಾಡಲಾಗಿದೆ;

ಆ) ಎಸ್.ಎಫ್.ಸಿ. ಅನುದಾನದಂತೆ ಜನಸಂಖ್ಯೆ ಆಧಾರಿತವಾಗಿ ಹಣ ಆಯಾ ಪಟ್ಟಣಗಳಿಗೆ ಹಂಚಿಕೆ ಮಾಡಲು ಇರುವ ತೊಂದರೆಗಳೇನು;

ಇ) ಈ ರೀತಿ ಹಂಚಿಕೆ ಮಾಡುವುದರಿಂದ ಹೆಚ್ಚಾಗಿ ಜನಸಂಖ್ಯೆಯುಳ್ಳ ಪಟ್ಟಣಗಳ ಅಭಿವೃದ್ಧಿ ಕಾರ್ಯ ಕುಂಠಿತವಾಗುವುದಿಲ್ಲವೆ;

ಈ) ಹಾಗಿದ್ದಲ್ಲಿ, ಯಾವ ರೀತಿ ಸರಿಪಡಿಸಲಾಗುವುದು?

ಶ್ರೀ ಬಾಲಚಂದ್ರ ಜಾರಕಿ ಹೊಳಿ (ಪೌರಾಡಳಿತ, ಸ್ಥಳೀಯ ಸಂಸ್ಥೆಗಳ ಮತ್ತು ಸಾರ್ವಜನಿಕ ಉದ್ದಿಮೆಗಳ ಸಚಿವರು) :

ಅ) ಸರ್ಕಾರದ ಆದೇಶ ಸಂಖ್ಯೆ : ನಇ 15 ಸಮಸ 2009, ದಿನಾಂಕ: 24-06-2009ರ ಅನ್ವಯ ಸಿಎಂಎಸ್ಎಂಟಿಡಿಪಿ ಯೋಜನೆಯ ರೂಪುರೇಷೆ ಹಾಗೂ ಸರ್ಕಾರದ ದಿನಾಂಕ: 28-07-2009ರ ಸುತ್ತೋಲೆಯ ಮಾರ್ಗಸೂಚಿಯನ್ವಯ ಅನುದಾನವನ್ನು ಹಂಚಿಕೆ ಮಾಡಲಾಗಿದೆ.

ಆ) ಸಿಎಂಎಸ್ಎಂಟಿಡಿಪಿ ಯೋಜನೆಯ ಅನುದಾನವನ್ನು 2001ರ ಜನಗಣತಿ ಆಧಾರದ ಮೇಲೆ ಜಿಲ್ಲಾ ಕೇಂದ್ರ ಪಟ್ಟಣಗಳು, ತಾಲ್ಲೂಕು ಕೇಂದ್ರ

ಪಟ್ಟಣಗಳು ಮತ್ತು ಇತರೆ ಪಟ್ಟಣಗಳೆಂದು ವರ್ಗೀಕರಿಸಿ, ರಾಜ್ಯದ ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳಿಗೆ ಹಂಚಿಕೆ ಮಾಡಲಾಗಿರುತ್ತದೆ.

ಇ) ಸಿಎಂಎಸ್‌ಎಂಟಿಡಿಪಿ ಯೋಜನೆಯಲ್ಲಿ ನಗರಗಳ ಬೆಳವಣಿಗೆ ಗಮನದಲ್ಲಿಟ್ಟುಕೊಂಡು ಹೆಚ್ಚು ಜನಸಂಖ್ಯೆ ಉಳ್ಳ ಪಟ್ಟಣಗಳಿಗೆ ಆದ್ಯತೆ ನೀಡಿ ನಗರ ಮೂಲ ಸೌಕರ್ಯಗಳನ್ನು ಸೃಜಿಸುವುದು ಹಾಗೂ ಉನ್ನತೀಕರಿಸಿ ಪೌರಸೇವೆಗಳನ್ನು ವಿಸ್ತರಿಸುವ ಮಹತ್ವಾಕಾಂಕ್ಷೆ ಒಳಗೊಂಡಿರುತ್ತದೆ.

ಈ) ಜಿಲ್ಲಾ ಕೇಂದ್ರವಲ್ಲದ 6 ನಗರಸಭೆಗಳಿಗೆ ಈಗಾಗಲೇ ಹಂಚಿಕೆ ಆಗಿರುವ ತಲಾ ರೂ. 2.00 ಕೋಟಿಯೊಂದಿಗೆ ಹೆಚ್ಚುವರಿಯಾಗಿ ತಲಾ ರೂ.3.00 ಕೋಟಿ ಹೀಗೆ ಒಟ್ಟು ರೂ.5.00 ಕೋಟಿಯಂತೆ ಅನುದಾನವನ್ನು ಹಂಚಿಕೆ ಮಾಡಲು ಸರ್ಕಾರವು ಸಮ್ಮತಿಸಿರುತ್ತದೆ.

ವಸತಿ ರಹಿತರಿಗೆ ಆಶ್ರಯ ಕೊಡುವ ಕುರಿತು

235 (113) ಶ್ರೀ ಸಿದ್ದು ಸವದಿ (ತೇರದಾಳ) : ಮಾನ್ಯ ವಸತಿ, ವಾರ್ತಾ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ, ವಿಜ್ಞಾನ ತಂತ್ರಜ್ಞಾನ ಹಾಗೂ ಬೆಂಗಳೂರು ಜಲಮಂಡಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹಿಂದಿನ ಎರಡು ವರ್ಷಗಳಿಂದ ಇಲ್ಲಿಯವರೆಗೆ ರಾಜ್ಯದಲ್ಲಿ ವಸತಿ ರಹಿತರಿಗೆ ಒದಗಿಸಿದ ಎಲ್ಲಾ ಯೋಜನೆಗಳು ಸೇರಿ, ವಿತರಿಸಿದ ಒಟ್ಟು ಮನೆಗಳ ಸಂಖ್ಯೆ ಎಷ್ಟು; (ಪಟ್ಟಣ ಮತ್ತು ಗ್ರಾಮೀಣ ಪ್ರತ್ಯೇಕವಾಗಿ ಮಾಹಿತಿ ನೀಡುವುದು);

ಆ) •ಪಟ್ಟಣಗಳಲ್ಲಿ ಬಹಳಷ್ಟು ಕಡುಬಡವರು, ದಲಿತರು ಕೊಳಚೆ ಪ್ರದೇಶದಲ್ಲಿ ವಾಸಿಸುವವರಿಗೆ ಇದುವರೆಗೆ ಆಶ್ರಯಗಳನ್ನು ಕೊಡದೆ ಇರುವ ಕಾರಣಗಳೇನು;

ಇ) ಈ ವರ್ಷದಲ್ಲಾದರೂ ನಗರ ಹಾಗೂ ಕೊಳಚೆ ಪ್ರದೇಶದ ನಿವಾಸಿಗಳಿಗೆ ಆಶ್ರಯ ಕೊಡಲಾಗುವುದೇ; (ಸಂಪೂರ್ಣ ವಿವರ ನೀಡುವುದು);

ಈ) ಹಾಗಿದ್ದಲ್ಲಿ, ಯಾವ ಯಾವ ಯೋಜನೆಗಳಲ್ಲಿ ಕೊಡಲಾಗುವುದು; (ಸಂಪೂರ್ಣ ವಿವರ ನೀಡುವುದು)?